**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ**

**C.C.No.82/2023**

| | | |
|---|---|---|
| **ಹೆಸರುಃ** | **ಶಿವಾನಂದ** | **CW-3** |
| **ತಂದೆ/ಗಂಡ ಹೆಸರುಃ** | **ಆನಂದ್** | **PW-2** |
| **ವಯಸ್ಸುಃ** | **28 ವರ್ಷ** | |
| **ವೃತ್ತಿಃ** | **ಕೇಬಲ್ ಕೆಲಸ** | |
| **ವಿಳಾಸಃ** | **ಬಾಸರವಳ್ಳಿ ಗ್ರಾಮ** | **ದಿನಾಂಕಃ 27-07-2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ನನಗೆ ಚಾಸಾ 4 ರವರ ಪರಿಚಯವಿರುತ್ತದೆ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿ ಗುರುತಿಸಿದ್ದರಿಂದ ಮಹಜರನ್ನು ಅದನ್ನು ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ 1 ಎ ಎಂದು ಗುರುತಿಸಲಾಯಿತು. ದಿಃ 09.10.2022 ರಂದು ಅರೇಹಳ್ಳಿ ಸಮೀಪ ಹುಲ್ಲೆಹಳ್ಳಿ ಗ್ರಾಮದ ಬಳಿ 1 ನೇ ಆರೋಪಿಯ ಜಮೀನಿನಲ್ಲಿ ದನಗಳನ್ನು ಕಟ್ಟಿ ಹಾಕಿ ಮಾಂಸ ಮಾಡಲು ಇಟ್ಟುಕೊಂಡಿದ್ದರು. ಒಂದು ದನವನ್ನು ಕಡಿದಿದ್ದು, ಉಳಿದ ದನಗಳನ್ನು ಕಡಿಯಲು ಕಟ್ಟಿ ಹಾಕಿರುತ್ತಾರೆಂಬ ಮಾಹಿತಿ ಬಂದಿರುತ್ತದೆ ಎಂದು ಪೋಲಿಸರು ತಿಳಿಸಿ ಪಂಚನಾಮೆಗೆ ಸಹಕರಿಸುವಂತೆ ಕೇಳಿದಾಗ ನಾನು ಒಪ್ಪಿಕೊಂಡಿರುತ್ತೇನೆ. ಆ ಸಮಯದಲ್ಲಿ ಚಾಸಾ 4 ರವರು ಸಹ ನನ್ನ ಜೊತೆ ಇದ್ದರು. ಆನಂತರ ಪೊಲೀಸರು ಅರೇಹಳ್ಳಿ ಮಾರ್ಗವಾಗಿ ಹುಲ್ಲೆಮನೆ ಗ್ರಾಮಕ್ಕೆ ನಮ್ಮನ್ನು ಕರೆದುಕೊಂಡು ಹೋದರು. ಸ್ಥಳದಲ್ಲಿ ತೋಟದ ಒಳಗೆ ಒಂದು ಶೆಡ್ ಇತ್ತು. ಶೆಡ್ ನ ಮುಂದೆ ಕಾಫಿ ಗಿಡದಲ್ಲಿ ದನಗಳನ್ನು ಕಟ್ಟಿ ಹಾಕಿದ್ದರು. ಶೆಡ್ ನ ಬಲಭಾಗದಲ್ಲಿ ನೀರು ಹರಿಯುವ ಜಾಗದಲ್ಲಿ ಒಂದು ದನವನ್ನು ಕಡಿದಿದ್ದರು. ಶೆಡ್ ನ ಮುಂಭಾಗದಲ್ಲಿ ಎರಡು ಬೈಕ್ ಗಳು ಒಂದು ಸ್ಕೂಟಿ ಮತ್ತು ಬೈಕ್ ಇದ್ದವು. ಸ್ಕೂಟಿ ವಾಹನದಲ್ಲಿ ಬಿಳಿ ಬಣ್ಣದ ಬ್ಯಾಗ ಇತ್ತು. ಅದರಲ್ಲಿ ಗೋ ಮಾಂಸ ಇತ್ತು. ಶೆಡ್ ನ ಪಕ್ಕದಲ್ಲಿ

ಮರದ ದಿಮ್ಮಿ, ತಕ್ಕಡಿ, ಮಾಂಸವನ್ನು ನೇತು ಹಾಕುವ ಕೋಕೆ , ಕತ್ತಿ ಇತ್ತು. ಒಂದು ಮೂಲೆಯಲ್ಲಿ ಬ್ಯಾಗ್ ನಲ್ಲಿ ಮಾಂಸ ಇತ್ತು.

ಶೆಡ್ ನ ಬಲಭಾಗದ ನೀರು ಹರಿಯುವ ಜಾಗದಲ್ಲಿ ಒಂದು ಹಸುವನ್ನು ಕಡಿದಿದ್ದರು. ಅರ್ಧ ಹಸು ಅಲ್ಲೆ ಇತ್ತು. ಪೊಲೀಸರು ಪಶು ವೈದ್ಯಾಧಿಕಾರಿಗಳನ್ನು ಸ್ಥಳಕ್ಕೆ ಬರುವಂತೆ ತಿಳಿಸಿದರು. ಮಾಂಸವನ್ನು ತಕ್ಕಡಿ ಮೂಲಕ ತೂಕ ಮಾಡಿದರು. ಸ್ಕೂಟಿ ಬೈಕ್ ನಲ್ಲಿ ಸುಮಾರು 18 ಕೆ ಜಿ ಮಾಂಸ ಇತ್ತು. ಶೆಡ್ ನಲ್ಲಿ ಸುಮಾರು 14-15 ಕೆ ಜಿ ಮಾಂಸ ಇತ್ತು. ತೋರೆಯಲ್ಲಿ ಚರ್ಮ ಸುಲ್ಲಿದ ಹಸು ಮಾಂಸ ಸುಮಾರು 250 ಕೆ ಜಿ ಇತ್ತು. ಎಲ್ಲ ಸೇರಿ ಸುಮಾರು ಒಟ್ಟು 300 ಕೆ ಜಿ ಮಾಂಸ ಇತ್ತು. ಶೆಡ್ ನ ಮುಂಭಾಗ ಕಾಫಿ ಗಿಡಗಳಿಗೆ ಸುಮಾರು 8 ದನಗಳನ್ನು ಕಟ್ಟಿ ಹಾಕಿದ್ದರು. ಪಶುವೈದ್ಯಾಧಿಕಾರಿಗಳು ಮಾಂಸವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ರತಿ ಬ್ಯಾಗ್ ನಿಂದ ತಲಾ ಒಂದು ತುಂಡಿನಂತೆ ಮೂರು ಮಾಂಸದ ತುಂಡುಗಳನ್ನು ಪ್ರತ್ಯೇಕವಾಗಿ ಉಪ್ಪು ಹಾಕಿ ಒಂದು ಡಬ್ಬದಲ್ಲಿ ಶೇಖರಣೆ ಮಾಡಿರುತ್ತಾರೆ. ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 4 ರ ವರೆಗೆ ಮಾಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು ಮಾ 1 ರಿಂದ 3 ಎಂದು ಗುರುತಿಸಲಾಗಿದೆ. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಅವರು ಓಡಿ ಹೋಗಿದ್ದು, ಹಿಂದಿನಿಂದ ನೋಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎ ಪಿ ವಕೀಲರಿಂದಃ**

ನಾನು ಪಿ ಯು ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕೇಬಲ್ ಕೆಲಸ ಮಾಡುತ್ತೇನೆ. ನಾನು ಭಜರಂಗ ದಳ ಸಂಘಟನೆಯಲ್ಲಿ ಇರುತ್ತೇನೆ. ನಾನು ನ್ಯಾಯಾಲಯಗಳಲ್ಲಿ ಸಾಕಷ್ಟು ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿರುತ್ತೇನೆಂದರೆ ಸರಿ. ನನ್ನ ಪೋನ್ ನಂಬರ್ ಪೊಲೀಸರ ಬಳಿ ಇರುತ್ತದೆ. ಅವರು ಬೇಕಾದಾಗ ನನ್ನನ್ನು ಕರೆಸುತ್ತಾರೆ ಎಂದರೆ ಸರಿಯಲ್ಲ. ಗೋ ಹತ್ಯೆ ಮತ್ತು ಇತರ ಪ್ರಕರಣಗಳಲ್ಲಿ ಪೊಲೀಸರು ನನ್ನನ್ನು ಕರೆ ಮಾಡಿ ಕರೆಸಿಕೊಳ್ಳುತ್ತಾರೆ. ಚಾಸಾ 4 ನನ್ನ ಸ್ನೇಹಿತ ಇರುತ್ತಾರೆ. ಚಾಸಾ 4 ಸಂಘಟನೆಯಲ್ಲಿ ಇರುವುದಿಲ್ಲ. ದಿಃ 09.10.2022 ರಂದು ನನಗೆ ಪೊಲೀಸರು ಕರೆ ಮಾಡಿದಾಗ ನಾನು ಉದೇವಾರದಿಂದ ಸಕಲೇಶಪುರಕ್ಕೆ ಬರುತ್ತಿದ್ದು, ಸುಂಡೇಕೆರೆ ಗ್ರಾಮದಲ್ಲಿ ಇದ್ದೆ. ಆ ಸಮಯದಲ್ಲಿ ಚಾಸಾ 4 ರವರು ನನ್ನ ಜೊತೆ ಇದ್ದರು. ಪೊಲೀಸರು ಕರೆ ಮಾಡಿ ಸುಂಡೇಕೆರೆ

ಗ್ರಾಮದಲ್ಲಿ ಇರುವಂತೆ ತಿಳಿಸಿದಾಗ ನಾವು ಅಲ್ಲೇ ಇದ್ದು ಪೊಲೀಸರು ಬಂದ ನಂತರ ನಾನು ಮತ್ತು ಚಾಸಾ 4 ರವರು ನಮ್ಮ ವಾಹನದಲ್ಲಿ ಮತ್ತು ಪೊಲೀಸರು ಅವರ ವಾಹನದಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಪೊಲೀಸರು ಚಾಸಾ 1, 2 ಮತ್ತು 9 ರವರು ಇದ್ದರು. ಸುಂಡೇಕೆರೆ ಗ್ರಾಮದಿಂದ ಹುಲ್ಲೆಮಕ್ಕಿ ಗ್ರಾಮ ಸುಮಾರು 6 ಕಿಮೀ ಇರುತ್ತದೆ. ಘಟನಾ ಸ್ಥಳ ಮುಖ್ಯ ರಸ್ತೆಯಿಂದ 200-300 ಮೀಟರ ಅಂತರದಲ್ಲಿರುತ್ತದೆ. ಅದು ಮಣ್ಣು ರಸ್ತೆಯಾಗಿರುತ್ತದೆ. ಘಟನಾ ಸ್ಥಳವನ್ನು ಪೊಲೀಸರು ನನಗೆ ತೋರಿಸಿರುತ್ತಾರೆ. ಸದರಿ ತೋಟ ಎಷ್ಟು ಎಕರೆ ಇದೆ ಎಂದು ಗೊತ್ತಿಲ್ಲ. ಅದು ಕಾಫಿ ತೋಟವಾಗಿರುತ್ತದೆ.

ಶೆಡ್ ತೋಟದ ಯಾವ ದಿಕ್ಕಿನಲ್ಲಿ ಇದೆ ಎಂದು ಹೇಳಲು ಆಗುವುದಿಲ್ಲ. ಶೆಡ್ ಮುಖ್ಯ ರಸ್ತೆಯಿಂದ ಸುಮಾರು 300 ಮೀಟರ ಅಂತರದಲ್ಲಿ ಇರುತ್ತದೆ. ಸದರಿ ಶೆಡ್ ಸಿಮೆಂಟ್ ಅಸಪರ್ ಶೀಟ್ ಶೆಡ್ ಆಗಿತ್ತು. ಅದರ ಅಳತೆ 10*8 ಅಡಿ ಇರುತ್ತದೆ. ಅದಕ್ಕೆ ಹೊಂದಿಕೊಂಡು ಮತ್ತೊಂದು ಕೊಣೆ ಇತ್ತು. ಸದರಿ ಶೆಡ್ ಸುಮಾರು 3-4 ಅಡಿ ಸಿಮೆಂಟ್ ಗೋಡೆಯಿಂದ ಕಟ್ಟಿದ್ದು ಕೊಟ್ಟಿಗೆ ರೀತಿ ಇತ್ತು. ಕೊಟ್ಟಿಗೆ ಒಳಗೆ 3-4 ದನಗಳನ್ನು ಕಟ್ಟಿದ್ದರು. ಕೊಟ್ಟಿಗೆ ಹೊರಗೆ ಕಾಫಿ ಗಿಡಕ್ಕೆ 3-4 ದನಗಳನ್ನು ಕಟ್ಟಿದ್ದರು. 8 ದನಗಳಲ್ಲಿ ಹಸು ಎಷ್ಟು, ಹೋರಿ ಎಷ್ಟು ಮತ್ತು ಕರು ಎಷ್ಟು ಎಂದು ಹೇಳಲು ಆಗುವುದಿಲ್ಲ. ಅವುಗಳ ಬಣ್ಣ ಮತ್ತು ವಯಸ್ಸು ಗೊತ್ತಿಲ್ಲ. ನಾಟಿ ಹಸು ಮತ್ತು ಹೆಚ್ ಎಫ್ ಹಸುಗಳು ಇದ್ದವು. ಸ್ಥಳದಲ್ಲಿ ಒಂದು ಸ್ಕೂಟಿ ಮತ್ತು ಬೈಕ್ ಇದ್ದವು. ಅವುಗಳ ನಂಬರ್ ಗೊತ್ತಿಲ್ಲ. ಅವುಗಳ ಮಾಲೀಕರು ಯಾರೆಂದು ಪೊಲೀಸರು ತಿಳಿಸಿರುವುದಿಲ್ಲ. ಒಂದು ಎಕ್ಸಿಸ್ ಸ್ಕೂಟಿ ಮತ್ತೊಂದು ಟಿ ವಿ ಎಸ್ ಸ್ಟಾರ್ ಸಿಟಿ ಬೈಕ್ ಇತ್ತು. ಸ್ಕೂಟಿ ಮುಂಭಾಗ ಬಿಳಿ ಬಣ್ಣದ ಚೀಲದಲ್ಲಿ 18 ಕೆಜಿ ಮಾಂಸ ಇತ್ತು. ನ್ಯಾಯಾಲಯದ ಮುಂದೆ ಬಿಳಿ ಬಣ್ಣದ ಚೀಲ ಇಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಮರದ ದಿಮ್ಮಿ ಹೊರತುಪಡಿಸಿ ಮತ್ತೊಂದು ದಿಮ್ಮಿ ಒಂದೂವರೆ ಅಡಿ ಉದ್ದ ಮತ್ತು ಸುಮಾರು 2 ಅಡಿಯ ಸುತ್ತಳತೆಯ ದಿಮ್ಮಿ ಸಹ ಸ್ಥಳದಲ್ಲಿ ಇತ್ತು. ಮರದ ದಿಮ್ಮಿ ಗೆ ರಕ್ತದ ಕಲೆಯಾಗಿತ್ತು. ಸದರಿ 2 ಅಡಿ ಸುತ್ತಳತೆಯ ದಿಮ್ಮಿಯನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು ಮಾ ದಿಮ್ಮಿಯ ಮೇಲೆ ಸಣ್ಣ ಸಣ್ಣ ಮೂಳೆ ತುಂಡುಗಳು ಇದ್ದವು. ಮಾಂಸ ಕಡಿಯುವಾಗ ಮರದ ದಿಮ್ಮಿಯ ಚೆಕೆಗಳು

ಎಳುತ್ತದೆ ಎಂದರೆ ಸರಿ. ಮು ಮಾ ದಿಮ್ಮಿಯ ಮೇಲೆ ಮರದ ಚೆಕೆಗಳು ಎದ್ದಿರಲಿಲ್ಲ ಆದರೆ ಇನ್ನೊಂದು ಮರದ ದಿಮ್ಮಿಯ ಮೇಲೆ ಎದ್ದಿತ್ತು. ಮೂ ಮಾ ಮರದ ದಿಮ್ಮಿಯ ಮೇಲೆ ರಕ್ತದ ಕಲೆಗಳು ಇರುವುದಿಲ್ಲ ಮತ್ತು ಕತ್ತಿಯಿಂದ ಕಡಿದಿರುವ ಯಾವುದೇ ನಿಶಾನೆಗಳು ಇರುವುದಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮು ಮಾ ತಕ್ಕಡಿ ತೂಕ ಮಾಡಲು ಯೋಗ್ಯ ವಾಗಿರುವುದಿಲ್ಲ ಮತ್ತು ಅದು ಒಂದೇ ಲೇವೇಲ್ ನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ಸದರಿ ದಿನ ಮೂ ಮಾ ತಕ್ಕಡಿಯನ್ನು ಅಳತೆ ಮಾಡಲು ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಮಾಂಸವನ್ನು ಆಗ್ಗಾಗೆಲೇ ಅಳತೆ ಮಾಡಿ ಇಟ್ಟಿದ್ದರು. ಪೊಲೀಸರು  ಮತ್ತೊಂದು ತಕ್ಕಡಿಯನ್ನು ತೆಗೆದುಕೊಂಡು ಬಂದು ಅದರಲ್ಲಿ ಅಳತೆ ಮಾಡಿರುತ್ತಾರೆ. ಪೊಲೀಸರು ಅಳತೆ ಮಾಪನವನ್ನು ಎಲ್ಲಿಂದ ತಂದಿರುತ್ತಾರೆಂದು ಗೊತ್ತಿಲ್ಲ. ಅದು ಎಲೆಕ್ಟ್ರಾನಿಕ್ ಅಳತೆ ಮಾಪನವಾಗಿತ್ತು. ಅದನ್ನು ಯಾರು ತೆಗೆದುಕೊಂಡು ಬಂದಿರುತ್ತಾರೆಂದು ಗೊತ್ತಿಲ್ಲ ಮತ್ತು ಅದರ ಸಾಮರ್ಥ್ಯ ಎಷ್ಟು  ಎಂದು ಗೊತ್ತಿಲ್ಲ.

ಕತ್ತಿಯ ಮೇಲೆ ಹಸುವಿನ ಚರ್ಮ ತೆಗೆದ ರಕ್ತದ ಕಲೆ ಇತ್ತು. ಸತ್ತಾರ  ಮೇಲೆ ಮೂಳೆ ತೆಗೆದ ಕಲೆಗಳು ಇದ್ದವು. ನ್ಯಾಯಾಲಯದ ಮುಂದಿರುವ ಮು ಮಾ ಗಳು ಹೊಸ ಚಾಕುಗಳಾಗಿದ್ದು ಯಾವುದೇ ರಕ್ತದ ಕಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಮಾಂಸ ಮತ್ತು ಮು ಮಾ 1 ರಿಂದ 3 ಗಳನ್ನು ಹಿಡಿದುಕೊಂಡು ಪೊಲೀಸರು ಪೋಟೋ ತೆಗೆದಿರುತ್ತಾರೆ. ಮು ಮಾಗಳ  ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಿಲ್ಲ. ಶೆಡ್ ಗೆ ಹೊಂದಿಕೊಂಡು ಒಂದು ಸಣ್ಣ ಕೋಣೆ ಇದ್ದು ಸದರಿ ಕೋಣೆಯಲ್ಲಿ 14 ಕೆ ಜಿ ಮಾಂಸ ಇತ್ತು. ಸದರಿ ಕೊಣೆಯಲ್ಲಿ ಮಾಂಸ ಮತ್ತು ರಕ್ತದ ಕಲೆಗಳು ಇದ್ದವು. ಕೋಣೆಯಲ್ಲಿ ನೀರನ್ನು ಹಾಕಿದ್ದರು. ಪೊಲೀಸರು ನನ್ನ ಸಮಕ್ಷಮ ವಿಡಿಯೋ ಮಾಡಿಕೊಳ್ಳುತ್ತಿದ್ದರು. ಮಾಂಸ ನೇತು ಹಾಕುವ ಕೋಕೆಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ.

ಶೆಡ್ ನ ಬಲಭಾಗದಲ್ಲಿ ಸುಮಾರು 50 ಮೀಟರ್ ಅಂತರದಲ್ಲಿ ನೀರು ಹರಿಯುವ ಜಾಗ ಇರುತ್ತದೆ. ಸದರಿ ಜಾಗದಲ್ಲಿ ಚರ್ಮ ಸುಲ್ಲಿದ ಅರ್ಧ ಹಸುವಿನ ಮಾಂಸ ಸುಮಾರು 250 ಕೆ ಜಿ ಇತ್ತು. ಸದರಿ ಜಾಗದಲ್ಲಿ ಟಾರ್ಪಲ್ ಮೇಲೆ ಅರ್ಧ ಚರ್ಮ ತೆಗೆದ ಹಸು ಇತ್ತು. ಅಲ್ಲಿ ಚರ್ಮ ಸಹ ಇತ್ತು. ಸದರಿ ಚರ್ಮ ಬಿಳಿ ಮತ್ತು ಕಪ್ಪು ಮಿಶ್ರಿತ ಹೆಚ್ ಎಫ್ ಹಸುವಿನ ಬಣ್ಣವಾಗಿತ್ತು. ಟಾರ್ಪಲ್

6*6 ಅಡಿಯ ನೀಲಿ ಬಣ್ಣದ ಟಾರ್ಪಲ್ ಆಗಿತ್ತು. ಪೊಲೀಸರು ಮಾಂಸವನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಚರ್ಮವನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ಪೊಲೀಸರು ಪಂಚನಾಮೆಯಲ್ಲಿ ಸ್ಥಳದಲ್ಲಿದ್ದ ಎಲ್ಲ ವಸ್ತುಗಳ ಬಗ್ಗೆ ಮತ್ತು ಚರ್ಮದ ಬಗ್ಗೆ ಬರೆದಿರುತ್ತಾರೆ. ನ್ಯಾಯಾಲಯದ ಮುಂದಿರುವ ಕತ್ತಿ ಮತ್ತು ಚಾಕು ಕೋಣೆಯಲ್ಲಿದ್ದವು. ಪಶುವೈದ್ಯರು ಮಧ್ಯಾಹ್ನ 2 - 2.15 ಕ್ಕೆ ಬಂದಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ವೈದ್ಯರು ಒಂದು ಬ್ಯಾಗ್ ನ್ನು ತೆಗೆದುಕೊಂಡು ಬಂದಿರುತ್ತಾರೆ. ಸದರಿ ಬ್ಯಾಗ್ ನಲ್ಲಿ ಏನಿತ್ತು ಎಂದು ಗೊತ್ತಿಲ್ಲ. ವೈದ್ಯರು ಬ್ಯಾಗ್ ನಲ್ಲಿದ್ದ ತಲಾ ಒಂದು ಮಾಂಸದ ತುಂಡನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ ಮತ್ತು ಅರ್ಧ ಹಸುವಿನಿಂದ ಒಂದು ತುಂಡನ್ನು ಪಡೆದಿರುತ್ತಾರೆ. ಸದರಿ ಅರ್ಧ ಹಸುವಿನಿಂದ ಒಂದು ಮೂಳೆ ತುಂಡನ್ನು ಪಡೆದಿರುತ್ತಾರೆ. 3 ಮಾಂಸದ ತುಂಡು ಸೇರಿ ಸುಮಾರು 50 ಗ್ರಾಂ ಇತ್ತು.

ಮಾಂಸದ ತುಂಡನ್ನು ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಉಪ್ಪು ಹಾಕಿ ಆನಂತರ ಮಾಂಸದ ತುಂಡನ್ನು ಹಾಕಿ ನಂತರ ಅವರ ಮೇಲೆ ಉಪ್ಪು ಹಾಕಿ ಜಪ್ತು ಮಾಡಿರುತ್ತಾರೆ. ಮಾಂಸದ ತುಂಡನ್ನು ಮಾದರಿಗಾಗಿ ವೈದ್ಯಾಧಿಕಾರಿಗಳು ತೆಗೆದಿರುತ್ತಾರೆ. ಆನಂತರ ಅದನ್ನು ಬಿಳಿ ಬಟ್ಟೆಯಿಂದ ಸುತ್ತಿರುತ್ತಾರೆ. ಆನಂತರ ವೈದ್ಯರು ಸದರಿ ಮಾದರಿಯನ್ನು ಪೊಲೀಸರಿಗೆ ನೀಡುವ ಸಮಯದಲ್ಲಿ ಅದರ ಪೋಟೋವನ್ನು ಪೊಲೀಸರು ತೆಗೆದಿರುತ್ತಾರೆ. ಸದರಿ ಡಬ್ಬಕ್ಕೆ ಪ್ರಕರಣದ ನಂಬರ್ ಮತ್ತು ನಮ್ಮ ಸಹಿ ಇರುವ ಚೀಟಿ ಅಂಟಿಸಿರುವುದಿಲ್ಲ. ಆದರೆ ಸೀಲ್ ಮಾಡಿರುತ್ತಾರೆ. ಸದರಿ ಸೀಲ್ ಯಾವ ಅಕ್ಷರ ಇತ್ತು ಎಂದು ಗೊತ್ತಿಲ್ಲ. ಸದರಿ ಮಾದರಿ ಸೀಲ್ ನ್ನು ನಾನು ನೋಡಿರುವುದಿಲ್ಲ.

ನಾವು ಸ್ಥಳಕ್ಕೆ ಕಾಫಿ ತೋಟದ ಬಳಿ ಹೋದಾಗ ಆರೋಪಿತರು ಶೆಡ್ ನ ಹಿಂಭಾಗದಿಂದ ಓಡಿ ಹೋಗಿರುತ್ತಾರೆ. ಎಷ್ಟು ಅಂತರದಿಂದ ಓಡಿಹೋಗಿರುತ್ತಾರೆಂದು ಹೇಳಲು ಆಗುವುದಿಲ್ಲ. ಸ್ಥಳದಲ್ಲಿ 3-4 ಜನ ಇದ್ದರು. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಯಾರು ಇರಲಿಲ್ಲ. ಆರೋಪಿತರನ್ನು ಇದೇ ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆಂದರೆ ಸಾಕ್ಷಿ ಸದರಿ ದಿನ ಹಿಂದಿನಿಂದ ಅವರನ್ನು ನೋಡಿರುತ್ತೇನೆಂದು ನುಡಿಯುತ್ತಾರೆ. ಹಿಂದಿನಿಂದ ಅವರ ಮುಖಚರ್ಯನ್ನು ನೋಡಿರುವುದಿಲ್ಲ ಎಂದರೆ ಸರಿ. ಇದೇ ಮೊದಲ ಬಾರಿಗೆ ಆರೋಪಿತರ ಮುಖ ನೋಡುತ್ತಿದ್ದೇನೆಂದರೆ ಸರಿ. ಪಂಚನಾಮೆಯನ್ನು ಪೊಲೀಸರು ಬರೆದಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ಪಂಚನಾಮೆಗೆ ನನ್ನ ಜೊತೆ

ಚಾಸಾ 4 ರವರು ಸಹಿ ಮಾಡಿರುತ್ತಾರೆ. ಪೊಲೀಸರು ಪೂರ್ಣ ಪಂಚನಾಮೆ ಆಗುವವರೆಗೂ ಅಲ್ಲೆ ಇದ್ದರು.

ಸದರಿ ದಿನ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮು ಮಾಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಫೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋದಾಗ ಉಪವಿಭಾಗಾಧಿಕಾರಿಗಳು ಬಂದಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆಮಾಲಿಗೂ ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ**
**ಸಕಲೇಶಪುರ**